

# ಸಾಧನೆಯ ಬಗೆಗಳು

ಪ್ರಪಂಚದಲ್ಲಿ ಸಸ್ಯ, ಪ್ರಾಣಿ-ಪಕ್ಷಿ, ಕ್ರಿಮಿಕೀಟಗಳು ಹಾಗೂ ಮಾನವ — ಎಲ್ಲರೂ ಜೀವಿಸುವುದು ಬೇರೆ ಬೇರೆ ರೀತಿಯಲ್ಲಿ. ಒಂದೊಂದು ಜೀವಿಗೂ ಅದರದೇ ಆದ ಜೀವನ ವಿಧಾನವಿದೆ. ಆದರೂ ಜೀವಿಗಳೆಲ್ಲ ಒಬ್ಬಂಟಿಯಾಗಿ ಬದುಕಲಾರವು. ಗುಂಪು, ಹಿಂಡು, ಬಳಗ, ಸಮಾಜ — ಇವು ಒಂದು ಜೀವಿಯ, ಒಂದು ವ್ಯಕ್ತಿಯ ಜೀವನಕ್ರಮವನ್ನು ರೂಪಿಸುತ್ತವೆ. ಆಹಾರ, ನಿದ್ರೆ, ವಿನೋದ-ವಿಹಾರ, ಸಂತಾನೋತ್ಪತ್ತಿ, ವಾಸಕ್ಕೆ ಯೋಗ್ಯವಾದ ಸ್ಥಳ — ಇವೆಲ್ಲವನ್ನೂ ಸಂಪಾದಿಸಿ ಬದುಕುವ ವಿಧಾನವೇ ಜೀವಿಗಳಲ್ಲಿ ಕಂಡುಬರುವ ಸಾಮಾನ್ಯ ಸಂಗತಿ; ಅವುಗಳ ಸಹಜ ಕ್ರಿಯೆ. ಇದಕ್ಕೆ ಮಾನವನೂ ಹೊರತಲ್ಲ. ವಿದ್ಯಾಭ್ಯಾಸ, ಚಿಂತನೆ, ಬುದ್ಧಿಶಕ್ತಿ ಇವು ಮಾನವನಲ್ಲಿ ಕಂಡುಬರುವ ವಿಶಿಷ್ಟ ಸ್ವಭಾವವಾಗಿದ್ದರೂ, ಜೀವನದ ಹಲವು ಸಂಗತಿಗಳನ್ನು ಗಮನಿಸುವಾಗ ಅವನಿಗೂ ಉಳಿದ ಜೀವಿಗಳಿಗೂ ಹೆಚ್ಚಿನ ವ್ಯತ್ಯಾಸವಿಲ್ಲ. ಜನನ-ಮರಣದ ನಡುವಿನ ಬದುಕು ಆಯಾ ಜೀವಿಗಳ ಆಶೋತ್ತರಗಳನ್ನು ಪೂರೈಸುತ್ತ ಅವುಗಳನ್ನು ಮುನ್ನಡೆಸುತ್ತದೆ.

## ವಿಭಿನ್ನ ಮಾರ್ಗ

ಆದರೆ ಮಾನವರಲ್ಲಿ ಕೆಲವರು ಮಾತ್ರ ತಮ್ಮ ಜೀವನ ವಿಧಾನವನ್ನು ಸಂಪೂರ್ಣ ಬದಲಾಯಿಸಿಕೊಂಡರು. ಬೇರೆ ಯಾವ ಜೀವಿಗಳಿಗೂ ಇಲ್ಲದ ಹೊಸ ಒಂದು ಉದ್ದೇಶ ಇವರಿಗೆ ಕಂಡುಬಂತು. ಕೇವಲ ಆಹಾರ, ನಿದ್ರೆ, ಮೈಥುನ, ಸಂಪಾದನೆ, ವಾಸಗೃಹ, ಸುಖ ಸವಲತ್ತು ಇಷ್ಟರಿಂದಲೇ ಅವರು ತೃಪ್ತರಾಗಲಿಲ್ಲ. ಇವುಗಳಾಚೆಗೆ, ವ್ಯಕ್ತಪ್ರಪಂಚದ ಆಚೆಗೆ ಇನ್ನೇನೋ ಇದೆ; ಎಲ್ಲವನ್ನೂ ನಿಯಂತ್ರಿಸುವ, ಎಲ್ಲದಕ್ಕೂ ಕಾರಣವಾದ ಒಂದು ಶಕ್ತಿಯಿದೆ; ಅದನ್ನು ಅರಿತುಕೊಳ್ಳಬೇಕು, ಅದನ್ನು ಹೊಂದಬೇಕು ಎಂಬ ಹೊಸ ಒಂದು ಲಕ್ಷ್ಯ ಅವರದಾಯಿತು. ದೇವರ ಅಸ್ತಿತ್ವವನ್ನು ಆಧರಿಸಿ, ಅದನ್ನು ಸಾಕ್ಷಾತ್ಕರಿಸಿಕೊಳ್ಳುವ ಅಂತಿಮ ಗುರಿಯನ್ನೇ ಜೀವನದ ಪರಮ ಉದ್ದೇಶವನ್ನಾಗಿ ಮಾಡಿಕೊಂಡ ಕೆಲವೇ ಕೆಲವು ಮಂದಿ ಧೀರರು ('ಬುದ್ಧಿವಂತ' ಎಂದು ಅಕ್ಷರಶಃ ಅರ್ಥ) ಎಲ್ಲರಿಗಿಂತ ಪ್ರತ್ಯೇಕವಾಗಿ ತಮ್ಮ ಜೀವನವನ್ನು ಬದಲಾಯಿಸಿಕೊಂಡರು. ಏಕಾಂತ ವಾಸ, ಧ್ಯಾನ-ಚಿಂತನೆ, ಉಪಾಸನೆ, ಅಧ್ಯಯನ ಇವುಗಳಲ್ಲೇ ಮುಳುಗಿ, ಸತ್ಯಾನ್ವೇಷಣೆಯಲ್ಲಿ ತೊಡಗಿಕೊಂಡರು. ಕ್ರಮೇಣ ಅವರಿಗೆ ಪರಮಸತ್ಯ ಗೋಚರವಾಯಿತು. ಅದನ್ನು ಅವರು ಸಮಾಜದ ಇತರರಿಗೂ ತಿಳಿಸಲೆಂದೇ ಆ ಸತ್ಯಕ್ಕೆ ಮಾತಿನ ರೂಪ ಕೊಟ್ಟರು. ಅಂಥ ಮಾತುಗಳನ್ನೇ ವೇದ, ಮಂತ್ರ ಎಂದೆಲ್ಲ ಕರೆದರು. ಅವರ ಉನ್ನತ, ಶ್ರೇಷ್ಠ ಬದುಕನ್ನು ಕಂಡು, ಏಕಾಂತದಲ್ಲಿ ಧ್ಯಾನಮಯ ಬದುಕನ್ನು ನಡೆಸುವ ಅವರನ್ನು ಜನರು ಋಷಿ, ಮುನಿ, ಸಂನ್ಯಾಸಿ ಎಂದು ಕರೆದು ಪೂಜಿಸಿದರು; ಸಮಾಜದಲ್ಲಿ ಅವರಿಗೆ ಉನ್ನತ ಸ್ಥಾನವನ್ನು ನೀಡಿದರು. ಹೀಗೆ ಕೆಲವೇ ಮಂದಿ ಕಂಡುಕೊಂಡ ಈ ವಿಭಿನ್ನ ಮಾರ್ಗ ನಮ್ಮ ದೇಶದಲ್ಲಿ ಮುಂದೆ ಇಡೀ ಸಮಾಜವನ್ನೇ ಪ್ರಭಾವಿಸಿತು. ದೇವರು, ಧರ್ಮ, ಅಧ್ಯಾತ್ಮ ಸಮಾಜದ ವಿವಿಧ ಮಜಲುಗಳನ್ನು ಪ್ರವೇಶಿಸಿತು. ಕುಟುಂಬ ಜೀವನದಿಂದ ಪ್ರತ್ಯೇಕವಾಗಿ ಬದುಕುತ್ತ ಭಗವದ್ ಸಾಕ್ಷಾತ್ಕಾರಕ್ಕಾಗಿ ಎಲ್ಲವನ್ನೂ ತ್ಯಜಿಸಿದವರಿಗೆ ಮಾತ್ರವಲ್ಲ; ಸಾಮಾನ್ಯ ಜೀವನ ನಡೆಸುವ ಎಲ್ಲರಿಗೂ ದೇವರು, ಧರ್ಮ ಅಗತ್ಯವೆಂಬುದನ್ನು ನಮ್ಮ ದೇಶ ಕಂಡುಕೊಂಡಿತು.

## ಹಲವು ಮಾರ್ಗಗಳ ಅಗತ್ಯ

ಆಧ್ಯಾತ್ಮಿಕ ವಿಚಾರಗಳು, ದೇವರು-ಧರ್ಮ ಕೆಲವರಿಗೆ ಮಾತ್ರ ಸಾಲದು; ಸಮಾಜದ ಎಲ್ಲರಿಗೂ ಅದು ಅಗತ್ಯವೆಂಬ ಕಾರಣಕ್ಕಾಗಿಯೇ ನಮ್ಮಲ್ಲಿ ಈ ಬಗೆಯ ಧಾರ್ಮಿಕ ಜೀವನವನ್ನು ನಡೆಸುವುದಕ್ಕೆ ನೂರಾರು ಮಾರ್ಗಗಳು ರೂಪುಗೊಂಡವು. ಎಲ್ಲವನ್ನೂ ತ್ಯಜಿಸಿ ಸತ್ಯಾನ್ವೇಷಣೆಗೆ ಹೊರಟ 'ಧೀರ'ರ ಮಾತೇ ಬೇರೆ; ಅವರು ಸತ್ಯಾನ್ವೇಷಣೆಗೆ ತಮ್ಮದೇ ಆದ ಮಾರ್ಗ ಕಂಡುಕೊಳ್ಳಬಲ್ಲರು. ಆದರೆ ಉಳಿದವರಿಗೆ ಯೋಗ್ಯಮಾರ್ಗದರ್ಶನ, ಆಚರಣೆಗೆ ಒಂದು ವಿಧಾನ, ಆ ವಿಧಾನವನ್ನು ಕಲಿಸುವ ಪರಂಪರೆ ಎಲ್ಲವೂ ಅಗತ್ಯವಾಯಿತು. ಹೀಗೆ ಶತಶತಮಾನಗಳ ದೀರ್ಘ ಕಾಲದಲ್ಲಿ ರೂಪುಗೊಂಡ ಆಧ್ಯಾತ್ಮಿಕ ಮಾರ್ಗಗಳು ಅನೇಕ. ಸಮಾಜದಲ್ಲಿ ವ್ಯಕ್ತಿ-ವ್ಯಕ್ತಿಗಳ ನಡುವೆ ಸ್ವಭಾವ, ಸಾಮರ್ಥ್ಯ, ಮನೋಭಾವಗಳಲ್ಲಿ ಎಲ್ಲೆಡೆ ವ್ಯತ್ಯಾಸ ಕಂಡುಬರುತ್ತದೆ. ಅದಕ್ಕೆ ಅನುಗುಣವಾಗಿ ವಿಭಿನ್ನ ವ್ಯಕ್ತಿಗಳಿಗೆ ಅನುಸರಿಸಲು ಯೋಗ್ಯವಾದ ಹಲವಾರು ಮಾರ್ಗಗಳು ರೂಪುಗೊಂಡವು. ಯಾವ ಮಾರ್ಗವನ್ನಾದರೂ ಅನುಸರಿಸಿ ದೇವರ ಕಡೆಗೆ ಸಾಗುವ ಆಯ್ಕೆ, ಸ್ವಾತಂತ್ರ್ಯ ನಮ್ಮ ದೇಶದಲ್ಲಿ ಮಾತ್ರ ಕಂಡುಬಂತು.

ವೇದ, ಉಪನಿಷತ್ತುಗಳ ಅತಿಪ್ರಾಚೀನ ಕಾಲದಲ್ಲೇ ಸತ್ಯಾನ್ವೇಷಣೆಗೆ ಹಲವು ಮಾರ್ಗಗಳಿದ್ದಂತೆ ನಮಗೆ ತಿಳಿದು ಬರುತ್ತದೆ. ಅದು ಆಧ್ಯಾತ್ಮಿಕ ಅನ್ವೇಷಣೆಯ ಕಾಲ, ಬೆಳವಣಿಗೆಯ ಕಾಲ. ಆದ್ದರಿಂದ ಅವರು ಕಂಡ ಸತ್ಯದ ದರ್ಶನವೂ ಬದಲಾಗುತ್ತ

ಬಂತು; ತಲುಪಬೇಕಾದ ಗುರಿಯೂ ಬದಲಾಗುತ್ತ ಬಂತು. ಅದಕ್ಕೆ ತಕ್ಕಂತೆ ಗುರಿಯನ್ನು ತಲುಪುವ ವಿಧಾನವೂ ಮಾರ್ಪಡುತ್ತ ಬಂತು. ವೈದಿಕ ಜೀವನದ ಆರಂಭದಲ್ಲಿ ಯಾಗ, ಯಜ್ಞ, ಉಪಾಸನೆಗಳ ಮೂಲಕ ಇಷ್ಟಾರ್ಥಗಳನ್ನು ಪೂರೈಸುವುದು ಹಾಗೂ ಸ್ವರ್ಗವೇ ಮೊದಲಾದ ಲೋಕಗಳನ್ನು ಹೊಂದುವುದು ಪ್ರಧಾನ ಗುರಿಯಾಗಿ ಕಂಡುಬಂದರೆ, ಅಂತಿಮ ಭಾಗದಲ್ಲಿ (ಅಥವಾ ಉಪನಿಷತ್ತುಗಳ ಕಾಲಘಟ್ಟದಲ್ಲಿ) ಸತ್ಯಾನ್ವೇಷಣೆ, ಆತ್ಮ-ಬ್ರಹ್ಮ ಇದರ ಸಾಕ್ಷಾತ್ಕಾರ, ವಿಚಾರ-ಚಿಂತನೆ, ಧ್ಯಾನ-ಯೋಗ ಮೊದಲಾದ ಆಧ್ಯಾತ್ಮಿಕ ಮಾರ್ಗಗಳು ಕಂಡುಬರುತ್ತವೆ. ಹೀಗೆ ಉಪಾಸನೆ ಅಥವಾ ಭಕ್ತಿ ವೈದಿಕ ಜೀವನದ ಮೊದಲ ಘಟ್ಟದಲ್ಲೂ, ವಿಚಾರ ಅಥವಾ ಜ್ಞಾನ ಅಂತಿಮ ಘಟ್ಟದಲ್ಲೂ ಪ್ರಧಾನವಾಗಿ ರೂಪುಗೊಂಡವು. ಮುಂದೆ ಇವುಗಳನ್ನೇ ವಿವಿಧ 'ಯೋಗ'ಗಳಾಗಿ, ಅಂದರೆ ಸಾಧನೆಯ ಮಾರ್ಗಗಳಾಗಿ ಪರಿಗಣಿಸಿದ್ದನ್ನು ಕಾಣುತ್ತೇವೆ. ಭಗವದ್ಗೀತೆಯಲ್ಲಿ ಕಂಡುಬರುವ ವಿವಿಧ ಯೋಗಗಳೇ ಇದಕ್ಕೆ ಯೋಗ್ಯ ನಿದರ್ಶನ.

### ಜ್ಞಾನ: ಪ್ರಾಚೀನ ಮಾರ್ಗ

ಪ್ರಪಂಚದ ಹಲವು ಧರ್ಮಗಳಲ್ಲಿ ಜ್ಞಾನಮಾರ್ಗವೇ ಅಂತಿಮ ಗುರಿಯಾದ ಭಗವಂತನನ್ನು ಸೇರುವ ಮಾರ್ಗವೆಂದು ಪರಿಗಣಿಸಿದ್ದನ್ನು ಕಾಣುತ್ತೇವೆ. ವಿಶೇಷವಾಗಿ, ಭಾರತದಲ್ಲಿ ಹುಟ್ಟಿ ಬೆಳೆದ ಹಿಂದೂ, ಬೌದ್ಧ ಧರ್ಮಗಳಲ್ಲಿ ಜ್ಞಾನವು ಸಾಧನ ಮಾರ್ಗವಾಗಿ ಪರಿಗಣಿಸಲ್ಪಟ್ಟಿದೆ. ತಪಸ್ಸು, ಧ್ಯಾನ, ನಿದಿಧ್ಯಾಸನ, ಅರಿಯುವುದು - ಈ ಎಲ್ಲ ಮಾತುಗಳಿಂದ ವಿವರಿಸಲಾದ ಈ ಪ್ರಕ್ರಿಯೆ ಭಗವಂತನನ್ನು ತಲುಪಲು ಇರುವ ಮಾರ್ಗವೆಂದೇ ಹಳೆಯ ಶಾಸ್ತ್ರಗ್ರಂಥಗಳೆಲ್ಲ ವಿವರಿಸುತ್ತವೆ. ಉಪನಿಷತ್ತುಗಳಲ್ಲಿ ಜ್ಞಾನ ಮಾರ್ಗದ ವಿಕಾಸವನ್ನು ಸ್ಪಷ್ಟವಾಗಿ ನಾವು ಗುರುತಿಸಬಹುದು. ಜ್ಞಾನ-ಅಜ್ಞಾನ ಇವುಗಳಿಗಿರುವ ಅಂತರ, ವಿವೇಕಿ ಅಥವಾ ಬುದ್ಧಿವಂತನು ಜಗತ್ತಿನ ಅರ್ಥಶೂನ್ಯತೆಯನ್ನರಿತು ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಬೇಕು, ಅದಕ್ಕಾಗಿ ಅಂತಹ ಧೀರನು ತನ್ನ ಅಂತರಂಗದಲ್ಲೇ ಆತ್ಮನನ್ನು ಕಂಡುಕೊಳ್ಳಬೇಕು— ಇಂತಹ ಮಾತುಗಳು ಉಪನಿಷತ್ತುಗಳಲ್ಲಿ ಕಂಡುಬರುತ್ತವೆ. ಯೋಗ, ಭಕ್ತಿ, ಇವುಗಳ ವಿಚಾರ ಕೂಡ ಉಪನಿಷತ್ತುಗಳಲ್ಲಿ ಅಲ್ಲಲ್ಲಿ ಕಂಡುಬರುವುದಿದ್ದರೂ, ಗುರುವಿನ ಉಪದೇಶದಂತೆ ಜ್ಞಾನಮಾರ್ಗದ ಮೂಲಕ ಸತ್ಯದ ಸಾಕ್ಷಾತ್ಕಾರ ಮಾಡಿಕೊಳ್ಳುವುದೇ ಅಲ್ಲಿನ ಪ್ರಧಾನ ವಿಧಾನ. (ಇದರ ನಂತರವೇ ನಮ್ಮಲ್ಲಿ ಜೈನ, ಬೌದ್ಧ ಧರ್ಮಗಳ ಉದಯವಾಯಿತು; ಅವುಗಳಲ್ಲಿ ಬೌದ್ಧಧರ್ಮವು ವೈದಿಕ ಪರಂಪರೆಗಿಂತ ಭಿನ್ನವಾಗಿ ನಡೆದರೂ, ಜ್ಞಾನ ಹಾಗೂ ವಿಚಾರವೇ ಅಂತಿಮ ಗುರಿಯನ್ನು ಹೊಂದಲು ಸಾಧನವೆಂಬುದನ್ನು ಎತ್ತಿಹಿಡಿಯಿತು.) ಹೀಗೆ ಉಪನಿಷತ್ತುಗಳಿಂದ ಆರಂಭಗೊಂಡ ಜ್ಞಾನಮಾರ್ಗದ ಪರಂಪರೆ ಮುಂದೆ ಷಡ್ದರ್ಶನಗಳ ಕಾಲದಲ್ಲಿ ಹಲವು ಮಂದಿ ಶ್ರೇಷ್ಠ ಸಾಧಕರ, ಋಷಿಮುನಿಗಳ ಮೂಲಕವೂ, ಶಂಕರ, ರಾಮಾನುಜ, ಮಧ್ವರೇ ಮೊದಲಾದ ಆಚಾರ್ಯರ ಮೂಲಕವೂ ವಿಸ್ತಾರಗೊಂಡಿತು. ಆಧುನಿಕ ಕಾಲದಲ್ಲಿ ಶ್ರೀರಾಮಕೃಷ್ಣ, ವಿವೇಕಾನಂದ, ಶ್ರೀರಮಣ ಮಹರ್ಷಿ, ಶ್ರೀ ಅರವಿಂದರು ಮುಂತಾದ ಸಂತರ ಪರಂಪರೆಯಲ್ಲೂ ಜ್ಞಾನಮಾರ್ಗ ಮತ್ತಷ್ಟು ವ್ಯಾಪಕಗೊಂಡಿತು. ಇತರ ಮಾರ್ಗಗಳ ಜೊತೆಗೆ ವಿಚಾರಮಾರ್ಗ ಇಂದಿಗೂ ಒಂದು ಪ್ರಧಾನ ಸಾಧನೆಯ ಮಾರ್ಗವಾಗಿ ಮುಂದುವರಿದಿದೆ.

### ಕರ್ಮ: ಹಳೆಯ, ಹೊಸ ಯುಗಗಳಲ್ಲಿ

ಭಗವದ್ಗೀತೆಯಷ್ಟು ಪ್ರಾಚೀನ ಕಾಲದಲ್ಲಿಯೇ ಕರ್ಮಯೋಗವೆಂಬುದು ಸಾಕ್ಷಾತ್ಕಾರಕ್ಕೆ ಒಂದು ಮಾರ್ಗವಾಗಿ ಪರಿಗಣಿತವಾಗಿತ್ತು, ನಿಜ. ಆದರೆ ಅದಕ್ಕಿಂತಲೂ ಹಿಂದೆ ಇದೊಂದು ಸಾಧನೆಯ ಮಾರ್ಗ ಎಂಬುದಕ್ಕೆ ಹೆಚ್ಚಿನ ಪುರಾವೆ ನಮ್ಮ ವೈದಿಕ ಸಾಹಿತ್ಯದಲ್ಲಾಗಲಿ, ಇತರ ಪ್ರಾಚೀನ ಗ್ರಂಥಗಳಲ್ಲಾಗಲೀ ಕಂಡು ಬರುವುದಿಲ್ಲ. ಗೀತೆಯಲ್ಲಿ '**ಕರ್ಮಣೈವ ಹಿ ಸಂಸಿದ್ಧಿಂ ಆಸ್ಥಿತಾ ಜನಕಾದಯಃ**' *(ಗೀತೆ, ೩.೨೦)* ಎಂಬ ಮಾತು ಬರುತ್ತದೆ. ('ಜನಕನೇ ಮೊದಲಾದವರು ಕರ್ಮದ ಮೂಲಕವೇ ಸಿದ್ಧಿಯನ್ನು ಪಡೆದವರಲ್ಲವೆ?') ಇಲ್ಲಿ ಜನಕನು ಕರ್ಮಯೋಗದ ಮೂಲಕ ಸಿದ್ಧಿಯನ್ನು ಹೊಂದಿದನು ಅಥವಾ ಗುರಿ ತಲುಪಿದನು ಎಂಬ ಮಾತು, ಕರ್ಮಯೋಗವೊಂದು ಸಾಧನೆಯ ಮಾರ್ಗವಾಗಿ ಸ್ವೀಕೃತವಾದ ವಿಚಾರವನ್ನು ಸೂಚಿಸುತ್ತದೆ. ಆದರೆ 'ಜನಕಾದಯಃ' ಎಂಬ ಮಾತು ಜನಕನಂತೆ ಇತರರೂ ಅದೇ ಮಾರ್ಗವನ್ನು ಅನುಸರಿಸಿ ಸಿದ್ಧಿಯನ್ನು ಹೊಂದಿದ್ದಾರೆ ಎಂಬುದನ್ನು ಹೇಳುತ್ತದೆ. ಹೀಗೆ ಕರ್ಮಯೋಗದ ಮೂಲಕ ಗುರಿಯನ್ನು ತಲುಪುವುದಾದರೂ ಹೇಗೆ? ಆಸಕ್ತಿಯಿಲ್ಲದೆ ಕರ್ಮ ಮಾಡುವ ಮೂಲಕ, ಫಲಾಪೇಕ್ಷೆಯಿಲ್ಲದೆ ಕರ್ಮ ಮಾಡುವ ಮೂಲಕ. ಗೀತೆ ವಿವರಿಸುವ ಈ ಬೋಧನೆ ಮುಂದೆ ಹೆಚ್ಚು ಪ್ರಚಲಿತವಾದಂತೆ ಕಂಡುಬರುವುದಿಲ್ಲ. ಏಕೆಂದರೆ ವಿವಿಧ ಧಾರ್ಮಿಕ ಪರಂಪರೆಗಳಲ್ಲಿ ಯೋಗ, ಜ್ಞಾನ, ಭಕ್ತಿ ಇವುಗಳ ಅನುಷ್ಠಾನ ವಿಪುಲವಾಗಿ ಕಂಡುಬರುತ್ತದೆ; ಆದರೆ ಕರ್ಮಯೋಗ ಮಾತ್ರ ಕಾಣಿಸುವುದಿಲ್ಲ. ಬಹುಶಃ ಪ್ರಾಚೀನ ಕರ್ಮಯೋಗದ ಪರಂಪರೆ ಮಧ್ಯಕಾಲದಲ್ಲಿ ಎಲ್ಲೋ ಸ್ಥಗಿತಗೊಂಡಿರಬಹುದೆ?

ಏನೇ ಇದ್ದರೂ, ಕರ್ಮಯೋಗಕ್ಕೆ ಮರುಹುಟ್ಟು ಬಂದಿರುವುದು ಸ್ವಾಮಿ ವಿವೇಕಾನಂದರಿಂದ ಎಂಬ ಅಂಶ ನಿರ್ವಿವಾದ. ಶ್ರೀರಾಮಕೃಷ್ಣರ 'ಶಿವಜ್ಞಾನೇ ಜೀವಸೇವಾ' (ಜೀವನಲ್ಲೇ ಶಿವನನ್ನು ಕಂಡು, ಈ ಜ್ಞಾನದಿಂದ ಜೀವಿಗಳ ಸೇವೆ ಮಾಡುವುದು) ಎಂಬ ಮಾತಿನಿಂದ ಹೊಸ ಬೆಳಕನ್ನು ಕಂಡ ಸ್ವಾಮೀಜಿ, ಈ ಮಾತಿನ ಹಿಂದೆ ಇದ್ದ ಅಗಾಧ ಅರ್ಥವನ್ನು ಕಂಡುಕೊಂಡರು. ಭರತಖಂಡದ ಹೀನ, ದೀನ ಸ್ಥಿತಿಗೆ ಸೂಕ್ತ ಪರಿಹಾರ ನೀಡಬಲ್ಲ ಸೇವೆಯ ಆದರ್ಶವು ಹೇಗೆ ಆಧ್ಯಾತ್ಮಿಕ ಆದರ್ಶವೂ ಆಗಿದೆ; ಹೇಗೆ ಅದ್ವೈತ ವೇದಾಂತದ ತತ್ತ್ವ ಈ ಮಾತಿನ ಹಿನ್ನೆಲೆಯಲ್ಲಿದೆ; ಎಲ್ಲ ಸಾಧನೆಯ ಮಾರ್ಗಗಳಿಗೂ ಇದು ಹೇಗೆ ಪೂರಕವಾದ ಮಾರ್ಗವಾಗಿದೆ ಎಂಬುದನ್ನು ಅವರು ಪ್ರಚುರಪಡಿಸಿದರು. ಒಬ್ಬ ವ್ಯಕ್ತಿಯ ಕರ್ಮಕ್ಷಯಕ್ಕಾಗಿ ಕರ್ಮಯೋಗವನ್ನು ಮಾಡುವ ಬಗೆಯನ್ನು ಅವರು ಹೊಸದಾಗಿ ತೋರಿಸಿಕೊಟ್ಟರು. ಅವರು ರಾಮಕೃಷ್ಣ ಮಹಾಸಂಘದ ಮೂಲಕ ಆರಂಭಿಸಿದ ಸೇವಾಕಾರ್ಯದ ಮೂಲಕ ಈ ಹೊಸ ಆದರ್ಶ ಭಾರತದೆಲ್ಲೆಡೆ ವ್ಯಾಪಿಸಿತು. ಇಂದು

ಹತ್ತುಹಲವು ಮಠ, ಆಶ್ರಮ, ಸಂಘಸಂಸ್ಥೆಗಳು ನಡೆಸುವ ಅನೇಕ ಸೇವಾಕಾರ್ಯಗಳಿಗೆ ಸ್ವಾಮೀಜಿಯವರು ತೋರಿಸಿಕೊಟ್ಟ ಈ ಕರ್ಮಯೋಗದ ಆದರ್ಶವೇ ಮೂಲಪ್ರೇರಣೆಯಾಗಿದೆ.

### ಯೋಗ: ಅದರ ಹಲವು ರೂಪಗಳು

ಜ್ಞಾನಮಾರ್ಗದಂತೆ ಯೋಗಮಾರ್ಗವೂ ಅತ್ಯಂತ ಪ್ರಾಚೀನ. ಆದರೆ ಅದು ಒಂದು ಸಾಧನೆಯ ಮಾರ್ಗವಾಗಿ ಪೂರ್ಣಮಟ್ಟದಲ್ಲಿ ವಿಕಸನಗೊಂಡಿದ್ದು ಅನಂತರ; ದರ್ಶನಗಳ ಕಾಲಘಟ್ಟದಲ್ಲಿ. ಪ್ರಧಾನವಾಗಿ, ಪತಂಜಲಿಯ ಯೋಗದರ್ಶನವು ಮುಕ್ತಿಗಾಗಿ ಯೋಗಮಾರ್ಗವನ್ನು ಅನುಸರಿಸುವ ವಿಧಾನವನ್ನು ವಿವರಿಸುತ್ತದೆ. ಪತಂಜಲಿಯ ಕಾಲದಲ್ಲೇ ಅಷ್ಟೊಂದು ಪ್ರಬುದ್ಧವಾದ ಯೋಗ ಪರಂಪರೆಯಿತ್ತು ಎಂಬುದನ್ನು ಈ ಗ್ರಂಥದಿಂದಲೇ ನಾವು ತಿಳಿಯಬಹುದು. ಪತಂಜಲಿಯ ಯೋಗಸೂತ್ರಗಳಲ್ಲಿ ಹೇಳಿರುವ ಯೋಗವಿಧಾನವು ಮುಕ್ತಿಗಾಗಿ ಇರುವ ಮಾನಸಿಕ, ಆಧ್ಯಾತ್ಮಿಕ ಸಾಧನೆ. ದೈಹಿಕ ಯೋಗ ಕೇವಲ ಅಷ್ಟಾಂಗಯೋಗದ ಒಂದು ಅಂಗವಷ್ಟೇ ಆಗಿದೆ.

ಆದರೆ ಮುಂದೆ ದೈಹಿಕ ಯೋಗ ಹಾಗೂ ಪ್ರಾಣಾಯಾಮದ ಅಭ್ಯಾಸ ಇತರ ಯೋಗಶಾಸ್ತ್ರದ ಗ್ರಂಥಗಳಲ್ಲಿ ಹೆಚ್ಚು ಪ್ರಮುಖ ಸ್ಥಾನ ಪಡೆಯಿತು. ಕೇವಲ ಆಧ್ಯಾತ್ಮಿಕ ಸಾಧಕರು ಮಾತ್ರವಲ್ಲದೆ ಜನಸಾಮಾನ್ಯರೆಲ್ಲ ಯೋಗಾಭ್ಯಾಸ ಮಾಡುವ ಕ್ರಮ ಹೆಚ್ಚು ಪ್ರಚಲಿತವಾಯಿತು. ಆದರೆ ಅಲ್ಲಿ ಕೂಡ ಅಷ್ಟಾಂಗಯೋಗ ಒಂದು ಪ್ರಧಾನ ವಿಧಾನವಾಗಿ ಪರಿಗಣಿಸಲ್ಪಟ್ಟಿದೆ.

ಯೋಗಶಾಸ್ತ್ರವು ಪ್ರಧಾನವಾಗಿ ಸಾಂಖ್ಯದರ್ಶನವನ್ನು ಪ್ರಾಯೋಗಿಕವಾಗಿ ಅನುಸರಿಸುವ ಒಂದು ಪರಂಪರೆ. ಯೋಗಶಾಸ್ತ್ರದಲ್ಲಿ ಹೇಳಿರುವ ಏಕಾಗ್ರತೆ, ಸಂಯಮ, ಯಮನಿಯಮಾದಿ ಬಾಹ್ಯ-ಆಂತರಿಕ ಶುದ್ಧೀಕರಣ ಇವುಗಳನ್ನು ವೇದಾಂತವೇ ಮೊದಲಾದ ಇತರ ಸಂಪ್ರದಾಯಗಳೂ ತಮ್ಮ ಪರಂಪರೆಯಲ್ಲಿ ಅಳವಡಿಸಿಕೊಂಡಿವೆ. ಆದ್ದರಿಂದ ಯೋಗಶಾಸ್ತ್ರವು ಸಾಂಖ್ಯತತ್ತ್ವವನ್ನು ಮೀರಿ ಕೂಡ ಪ್ರಚಲಿತವಾಗಿದೆ. ಅದರಲ್ಲಿ ಹೇಳಿರುವ ಮನಸ್ಸಿನ ವಿಶ್ಲೇಷಣೆ ಹಾಗೂ ಸಾಧನೆಗೆ ಮನಸ್ಸನ್ನು ನಿಯಂತ್ರಿಸಿಕೊಳ್ಳುವ ವಿಧಾನ ಸರ್ವಮಾನ್ಯವಾಗಿದೆ ಎನ್ನಬೇಕು.

### ಭಕ್ತಿ : ಅದರ ವ್ಯಾಪಕತೆ

ಉಳಿದೆಲ್ಲ ಸಾಧನೆಯ ಮಾರ್ಗಗಳಿಗಿಂತ ಭಾರತದಲ್ಲಿ ಹೆಚ್ಚು ವ್ಯಾಪಕವಾಗಿ ಮನ್ನಣೆ ಪಡೆದು, ಸಮಾಜದ ಎಲ್ಲ ಮಜಲುಗಳನ್ನು ಪ್ರವೇಶಿಸಿ, ಜನಸಾಮಾನ್ಯರೆಲ್ಲರ ನೆಚ್ಚಿನ ಆಧ್ಯಾತ್ಮಿಕ ಮಾರ್ಗವಾಗಿ ಮಾರ್ಪಟ್ಟಿರುವುದು ಭಕ್ತಿಮಾರ್ಗ. ಉಳಿದ ಮಾರ್ಗಗಳೊಂದಿಗೆ ಹೋಲಿಸಿದರೆ ಭಕ್ತಿಮಾರ್ಗ ಅನಂತರ ಬೆಳೆದು ಬಂದ ಪರಂಪರೆ. ಆದರೆ ಅದರ ಕುರುಹುಗಳನ್ನು ವೇದಗಳಲ್ಲಿನ ಸಂಹಿತಾಭಾಗಗಳಲ್ಲಿ ಕಾಣಬಹುದು. ಉಪಾಸನೆಯಾಗಿ ಅಲ್ಲಿ ಕಾಣಿಸಿಕೊಂಡ ಭಕ್ತಿ, ಮುಂದೆ ಭಕ್ತಿಪಂಥದ ಉದಯ ಹಾಗೂ ಪ್ರಸರಣದಿಂದ ಎಲ್ಲೆಡೆ ವ್ಯಾಪಿಸಿತು. ಬೇರೆ ಯಾವ ಮಾರ್ಗಗಳಿಗಿಂತಲೂ ಭಕ್ತಿ ಪಂಥದಲ್ಲಿ ಹೆಚ್ಚು ಸಂಖ್ಯೆಯ ಸಾಧು, ಸಂತರು ಹುಟ್ಟಿ ಬಂದರು; ಹಾಗೂ, ಜನಸಾಮಾನ್ಯರಿಗೆಲ್ಲ ಅನುಸರಿಸಬಹುದಾದ ಸುಲಭವೂ ವೈವಿಧ್ಯಪೂರ್ಣವೂ ಆದ ಸಾಧನ ವಿಧಾನ ಅದಾಗಿದೆ. ಇದರಿಂದಾಗಿ ಈ ಮಾರ್ಗ ತುಂಬ ಜನಪ್ರಿಯವಾಯಿತು. ಅದ್ವೈತಾಚಾರ್ಯರಾದ ಶ್ರೀಶಂಕರರು ಜ್ಞಾನಮಾರ್ಗವನ್ನೇ ಎತ್ತಿ ಹಿಡಿದಿದ್ದರೂ, ಭಕ್ತಿ ಹಾಗೂ ಉಪಾಸನೆ ಸಾಧನೆಗೆ ತುಂಬ ಉಪಯುಕ್ತವೆಂಬುದನ್ನು ಅವರು ಮರೆಯಲಿಲ್ಲ. ಇನ್ನು ವಿಶಿಷ್ಟಾದ್ವೈತ, ದ್ವೈತ ಹಾಗೂ ಇತರ ಮತಗಳ ಆಚಾರ್ಯರುಗಳಂತೂ ಭಕ್ತಿಯೇ ಭಗವಂತನ ಸಾಕ್ಷಾತ್ಕಾರಕ್ಕೆ ಅನಿವಾರ್ಯವಾದ ಅಂಶ ಎಂದು ಪ್ರತಿಪಾದಿಸಿದರು. ಎಲ್ಲಕ್ಕಿಂತ ಮುಖ್ಯವಾಗಿ ಅವತಾರ ಪುರುಷರಾದ ಶ್ರೀಕೃಷ್ಣ, ಶ್ರೀಚೈತನ್ಯ , ಶ್ರೀರಾಮಕೃಷ್ಣರು ಭಕ್ತಿಯ ಹಿರಿಮೆಯನ್ನು ಸಾರಿದರು; ಎಲ್ಲರಿಗೂ ಅದನ್ನೇ ಉಪದೇಶಿಸಿದರು. ಇದಲ್ಲದೆ, ರಾಮಾನಂದ, ಕಬೀರ, ಗುರುನಾನಕ್, ಮೀರಾಬಾಯಿ, ತುಕಾರಾಮ, ಪುರಂದರದಾಸರು, ಬಸವಣ್ಣ ಮುಂತಾದ ಸಂತರ ಜೀವನದ ಪ್ರಭಾವ ಹಾಗೂ ಅವರ ಬೋಧನೆಗಳು ಜನಸಾಮಾನ್ಯರ ಹೃದಯದಲ್ಲಿ ಅಚ್ಚೊತ್ತಿ ನಿಂತವು. ಆರಂಭಿಕ ಹಂತದಿಂದ ಹಿಡಿದು ಭಗವಂತನ ಸಾಕ್ಷಾತ್ಕಾರದವರೆಗೂ ಭಕ್ತಿಯ ವಿವಿಧ ಹಂತಗಳು ಆಚರಣೆಯಲ್ಲಿ ಕಂಡುಬರುತ್ತವೆ; ಅವು ಸಾಧಕನನ್ನು ಗುರಿಯತ್ತ ಸುರಕ್ಷಿತವಾಗಿ ಕೊಂಡೊಯ್ಯುವುವು.

### ಸ್ವಾಮೀಜಿ ಮತ್ತು ವಿವಿಧ ಮಾರ್ಗಗಳ ಸಮನ್ವಯ

ಸ್ವಾಮಿ ವಿವೇಕಾನಂದರು ಹತ್ತಾರು ಮಾರ್ಗಗಳನ್ನು, ಪ್ರಧಾನವಾಗಿ ರಾಜಯೋಗ, ಕರ್ಮಯೋಗ, ಭಕ್ತಿಯೋಗ ಹಾಗೂ ಜ್ಞಾನಯೋಗ — ಇವು ನಾಲ್ಕನ್ನು ಸಾಧನೆಯ ಮಾರ್ಗವಾಗಿ ಅನುಸರಿಸಲು ಬೋಧಿಸುತ್ತಾರೆ. ಅವರು ಹೇಳುವ ಈ ಯೋಗ ಸಮನ್ವಯ ಅತ್ಯಂತ ಪ್ರಸಿದ್ಧವೂ ಸರ್ವಮಾನ್ಯವೂ ಆಗಿದೆ. 'ರಾಜಯೋಗ'ದ ಮುನ್ನುಡಿಯಲ್ಲಿ ಹೇಳಿರುವ ಈ ಮಾತುಗಳಲ್ಲಿ ಸ್ವಾಮೀಜಿಯವರ ಸಮನ್ವಯದೃಷ್ಟಿ ಸ್ಪಷ್ಟವಾಗಿ ಮೂಡಿ ಬಂದಿದೆ:

''ಪ್ರತಿಯೊಂದು ಆತ್ಮನಲ್ಲಿಯೂ ದಿವ್ಯತೆ ಹುದುಗಿದೆ. ಈ ಸುಪ್ತವಾದ ದಿವ್ಯತೆಯನ್ನು ಬಾಹ್ಯ ಮತ್ತು ಆಂತರಿಕ ಪ್ರಕೃತಿಯ ನಿಗ್ರಹದಿಂದ ವ್ಯಕ್ತಪಡಿಸುವುದೇ ಜೀವನದ ಗುರಿ.

ಇದನ್ನು ಕರ್ಮಯೋಗದಿಂದಾಗಲಿ, ಭಕ್ತಿಯೋಗದಿಂದಾಗಲಿ, ರಾಜಯೋಗದಿಂದಾಗಲಿ, ಜ್ಞಾನಯೋಗದಿಂದಾಗಲಿ, ಯಾವುದಾದರೂ ಒಂದು ಮಾರ್ಗದಿಂದ ಅಥವಾ ಎಲ್ಲಾ ಮಾರ್ಗಗಳ ಸಂಯೋಗದಿಂದ ಆಗಲಿ ಸಾಧಿಸಿ ಮುಕ್ತರಾಗಿ.

ಇದೇ ಧರ್ಮದ ಸರ್ವಸ್ವ. ಸಿದ್ಧಾಂತ, ನಂಬಿಕೆ, ಬಾಹ್ಯಾಚಾರ, ಪವಿತ್ರ ಗ್ರಂಥ, ದೇವಸ್ಥಾನ, ವಿಗ್ರಹ — ಇವೆಲ್ಲ ಗೌಣ.'' ❋

### ಡಿಸೆಂಬರ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೩ | ಸೋಮವಾರ | ಏಕಾದಶಿ |
| ೧೭ | ಸೋಮವಾರ | ಸ್ವಾಮಿ ಪ್ರೇಮಾನಂದ ಜಯಂತಿ |
| ೧೮ | ಮಂಗಳವಾರ | ಏಕಾದಶಿ |
| ೨೪ | ಸೋಮವಾರ | ಕ್ರಿಸ್‌ಮಸ್ ಈವ್ |
| ೨೮ | ಶುಕ್ರವಾರ | ಶ್ರೀಶಾರದಾದೇವಿ ಜಯಂತಿ |